ಜರುಗಿಸಲು ಸೂಚಿಸಲಾಗಿದೆ. ಹಾಗೂ ತಪ್ಪು ಮಾಹಿತಿ ನೀಡಿ ಅಕ್ರಮವಾಗಿ ಮನೆ ಪರಿಹಾರ ಪಡೆದ ಫಲಾನುಭವಿಗಳ ವಿರುದ್ಧವು ಸಹ ಕ್ರಮ ಜರುಗಿಸಲಾಗುತ್ತಿದೆ.

ಇ) ಕ್ರಮ ಕೈಗೊಳ್ಳಲಾಗಿರುತ್ತದೆ.

ಈ) ಬಿದ್ದ ಮನೆಗಳ ಮಾಹಿತಿಯನ್ನು ತಃಖ್ತೆಯಲ್ಲಿ ಲಗತ್ತಿಸಿದೆ.

ಜಮೀನುಗಳಿಗೆ ಪರಿಹಾರ

673 (909) ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) ದೇವರ ಹಿಪ್ಪರಗಿ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಕಳೆದ ತಿಂಗಳು ಬಿದ್ದ ಭಾರಿ ಮಳೆ ಪ್ರವಾಹದಿಂದಾಗಿ ಡೋಣಿ ನದಿ ದಂಡೆಯ ಎಷ್ಟು ಎಕರೆ ಜಮೀನು ಸಂಪೂರ್ಣವಾಗಿ ಕೊಚ್ಚಿ ಹೋಗಿರುತ್ತದೆ; (ಎಕರೆವಾರು ಬೆಳೆ ಸಮೇತ ಗ್ರಾಮ ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಸದರಿ ಕೊಚ್ಚಿ ಹೋಗಿರುವ ರೈತರ ಜಮೀನುಗಳಿಗೆ ತಲಾ ಎಕರೆಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ;

ಇ) ಪರಿಹಾರ ನೀಡಿದ್ದಲ್ಲಿ ಇದುವರೆವಿಗೂ ಎಷ್ಟು ರೈತರಿಗೆ ಜಮೀನಿಗೆ ಪರಿಹಾರ ಒದಗಿಸಿದಂತಾಗಿದೆ (ಗ್ರಾಮವಾರು ರೈತರ ಹೆಸರಿನೊಂದಿಗೆ, ವಿಧಾನಸಭಾವಾರು ವಿವರ ನೀಡುವುದು);

ಈ) ಅತಿವೃಷ್ಟಿಯಿಂದ ನದಿ ಕಣಿವೆ ಪಾತ್ರದ ಜಮೀನುಗಳ ಜೊತೆ ಹಳ್ಳ ಕೆರೆ ಪಾತ್ರದ ಜಮೀನುಗಳು ಸಹ ಪ್ರವಾಹದಿಂದ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಬಂದಿದ್ದಲ್ಲಿ, ಸದರಿ ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಜಿಲ್ಲೆಯಲ್ಲಿ 2009ನೇ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಡೋಣಿ ನದಿ ದಂಡೆಯ ನಾಲ್ಕು ತಾಲ್ಲೂಕಿನ ಗ್ರಾಮಗಳಲ್ಲಿನ ಜಮೀನುಗಳು ಕೊಚ್ಚಿಕೊಂಡು ಹೋಗಿರುತ್ತದೆ. ಈ ಬಗ್ಗೆ ಜಲಾನಯನ

ಇಲಾಖೆಯಿಂದ ಸಮೀಕ್ಷೆ ಮಾಡಿಸಿದ್ದು, ತಾಲ್ಲೂಕುವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಹಾನಿಯಾದ ವಿಸ್ತೀರ್ಣದ ವಿವರಗಳನ್ನು ಲಗತ್ತಿಸಿದೆ.

ಆ) ಕೊಚ್ಚಿ ಹೋಗಿರುವ ರೈತರ ಜಮೀನುಗಳಿಗೆ ಸಿಆರ್‌ಎಫ್ ಮಾರ್ಗಸೂಚಿಯಂತೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮಾತ್ರ ಹೆಕ್ಟೇರು ಒಂದಕ್ಕೆ ರೂ. 6000–00 ದರದಲ್ಲಿ ಪರಿಹಾರ ಧನವನ್ನು ಜಲಾನಯನ ಅಧಿಕಾರಿಗಳಿಂದ ಪಾವತಿಸಲಾಗಿದೆ. ಒಟ್ಟು ರೂ. 277–00 ಲಕ್ಷಗಳ ಪರಿಹಾರ ಧನ ವಿತರಿಸಲಾಗಿದೆ.

ಇ) ಪರಿಹಾರ ನೀಡಿದ ಗ್ರಾಮಗಳು, ರೈತರ ಸಂಖ್ಯೆ ಮತ್ತು ಪಾವತಿಸಿದ ಮೊತ್ತದ ವಿವರಗಳನ್ನು ತಾಲ್ಲೂಕುವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಲಗತ್ತಿಸಿದೆ.

ಈ) ಹಳ್ಳ ಮತ್ತು ಕೆರೆಗಳ ಪ್ರವಾಹದ ನೀರಿನಿಂದಾಗಿ ಸಹ ಕೃಷಿ ಜಮೀನುಗಳು ಕೊಚ್ಚಿ ಹೋಗಿರುತ್ತವೆ. ಈ ಅಂಶವೂ ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಸಿಆರ್‌ಎಫ್ ಮಾರ್ಗಸೂಚಿಯ ಪ್ರಕಾರ ನದಿ ಪ್ರವಾಹದಿಂದ ಕೊಚ್ಚಿಹೋಗಿರುವ ಪ್ರದೇಶದ ಜಮೀನುಗಳಿಗೆ ಮಾತ್ರ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ.

ರೇಷ್ಮೆ ಇಲಾಖೆಯ ಹುದ್ದೆಗಳು

676 (264) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳುಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು/ ಅಧಿಕಾರೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಆ) ಈ ಇಲಾಖೆಯನ್ನು ಪುನರ್ ರಚನೆ ಮಾಡಲು ಸರ್ಕಾರ ನಿರ್ಧರಿಸಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಹುದ್ದೆಗಳನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿದೆ;

ಈ) ಈ ಇಲಾಖೆಯಲ್ಲಿ ಯಾವ ಯಾವ ಕಛೇರಿಗಳನ್ನು ಮುಚ್ಚಲು ತೀರ್ಮಾನಿಸಲಾಗಿದೆ;